ಬಿ) ಪದವಿ ಪೂರ್ವ ತರಗತಿಗಳಿಗೆ ಹೆಚ್ಚಿನ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆಂದು ಸುತ್ತೋಲೆಯನ್ನು ಹೊರಡಿಸಲಾಗಿದೆ. ಪದವಿ ತರಗತಿಗಳಿಗೆ ಸಂಬಂಧಿಸಿದಂತೆ ಅಂತಹ ಪ್ರಸ್ತಾವನೆ ಇಲ್ಲ.

ಸಿ) 14 (7 ಅರೆಕಾಲಿಕ ಉಪನ್ಯಾಸಕರೂ ಸೇರಿದಂತೆ)2 ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ.

ಡಿ) ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ 271 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಕರ್ನಾಟಕ ಲೋಕ ಸೇವಾ ಆಯೋಗವು ಈಗಾಗಲೇ ಅರ್ಜಿಗಳನ್ನು ಕರೆದಿದೆ. ಇದರ ಜೊತೆಗೆ 626 ಉಪನ್ಯಾಸಕರ ಹುದ್ದೆಗಳನ್ನು ಹೊಸದಾಗಿ ಸೃಷ್ಟಿಸಿ ಅವುಗಳನ್ನು ಸಹ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಭರ್ತಿ ಮಾಡಲಿ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುತ್ತಿದೆ. ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿ ಬಂದ ಕೂಡಲೇ ಸದರಿ ಕಾಲೇಜಿನಲ್ಲಿರುವ ಉಪನ್ಯಾಸಕರ ಕೊರತೆಯನ್ನು ನೀಗಿಸಲಾಗುವುದು.

ಝಾಲ್ಕಿ ಮತ್ತು ಲೇಲ್ಯಾನ್‌ನಲ್ಲಿ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವ ನಿರ್ಧಾರ

3310 - ಶ್ರೀ ಮನೋಹರ ಐನಾಪುರ. (ಬಳ್ಳೊಳ್ಳಿ): ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಝೂಲ್ಕಿ ಮತ್ತು ಲೇಲ್ಯಾನ್‌ನಲ್ಲಿ ಸಧ್ಯದಲ್ಲಿಯೋ 33 ಕೆ.ವಿ.ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವ ನಿರ್ಧಾರ ತೆಗೆದುಕೊಂಡಿರುವ ಬಗ್ಗೆ ಸರ್ಕಾರವು ಅನುಮತಿ ನೀಡುವ ಉದ್ದೇಶವಿದೆಯೆ?

ಬಿ) ಹಾಗಿದ್ದ ಪಕ್ಷದಲ್ಲಿ ಈ ಯೋಜನೆಗಳು ಯಾವಾಗ ಪೂರ್ಣಗೊಳ್ಳುವುವು?

ಸಿ) ಕರ್ನಾಟಕ ರಾಜ್ಯದಲ್ಲಿರುವ ಪಂಪ್‌ಸೆಟ್‌ಗಳಲ್ಲಿ ಇಂಡಿ ತಾಲ್ಲೂಕಿನಲ್ಲಿಯೇ ಅತಿ ಹೆಚ್ಚು ಪ್ರಮಾಣದ ಪಂಪ್‌ಸೆಪಟ್‌ಗಳು ಇರುವುದರಿಂದ ಧುಲ್ಕೇಡ್ (ಇಂಡಿ)ನಲ್ಲಿ ಮತ್ತೊಂದು 33 ಕೆ.ವಿ. ಉಪ ವಿದ್ಯುತ್ ಕೇಂದ್ರದ ಅವಶ್ಯಕತೆ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದ ಪಕ್ಷದಲ್ಲಿ ಇದು ಯಾವಾಗ ಸ್ಥಾಪಿಸಲ್ಪಡುತ್ತದೆ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಎ) ಈಗ ಝೂಲ್ಕಿಯಲ್ಲಿರುವ 5 ಎಂ.ವಿ.ಎ. 33:11 ಕೆ.ವಿ.ವಿದ್ಯುತ್ ಕೇಂದ್ರದಲ್ಲಿ ಅದರ ಸಾಮರ್ಥ್ಯವನ್ನು ಹೆಚ್ಚಿಸಲು ಇನ್ನೂ ಒಂದು 5 ಎಂ.ವಿ.ಎ.33:11 ಕೆ.ವಿ. ಪರಿವರ್ತಕವನ್ನು ಅಳವಡಿಸಲು ಯೋಜಿಸಲಾಗಿದೆ. ಲೆಲ್ಯಾನ್‌ನಲ್ಲಿ ಒಂದು ಹೊಸ 5 ಎಂ. ವಿ.ಎ 33:11 ಕೆ.ವಿ. ಸಾಮರ್ಥ್ಯದ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಬಿ) ಒಂದು ಹೆಚ್ಚುವರಿ 5 ಎಂ.ವಿ. ಎ.33:11 ಕೆ.ವಿ. ಸಾಮರ್ಥ್ಯದ ಪರಿವರ್ತಕವನ್ನು ಝೂಲ್ಕಿಯ ವಿದ್ಯುತ್ ಕೇಂದ್ರದಲ್ಲಿ ಅಳವಡಿಸುವ ಯೋಜನೆಯನ್ನು 1991-92ರಲ್ಲಿಯೆ ಪೂರ್ಣಗೊಳಿಸುವ ಗುರಿ ಇದೆ. ಲೇಲ್ಯಾನ್‌ನಲ್ಲಿ ಸ್ಥಾಪಿಸುವ 5 ಎಂ.ವಿ.ಎ 33:11 ಕೆ.ವಿ. ವಿದ್ಯುತ್ ಕೇಂದ್ರದ ಯೋಜನೆಯು 1992-93ನೇ ವರ್ಷದಲ್ಲಿ ಪೂರ್ಣಗೊಳಿಸುವ ಗುರಿ ಇದೆ.

ಇ) ಸದ್ಯದಲ್ಲಿ, ಧುಲ್ಕೇಡ್(ಇಂಡಿ)ನಲ್ಲಿ 33 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ.

ಈ) ಮೇಲೆ ಇದರಲ್ಲಿ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಕೆ.ಜಿ.ಎಫ್.ನ ಗೋಲ್ಡನ್ ವ್ಯಾಲಿ ಎಜುಕೇಷನಲ್ ಟ್ರಸ್ಟ್ ಇಂಜಿನಿಯರಿಂಗ್ ಕಾಲೇಜಿನಿಂದ ಕ್ಯಾಪಿಟೇಷನ್ ಶುಲ್ಕದ ವಸೂಲಿ

3467 - ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್.ನ ಗೋಲ್ಡನ್ ವ್ಯಾಲಿ ಎಜುಕೇಷನಲ್ ಟ್ರಸ್ಟ್ ಇಂಜಿನಿಯರಿಂಗ್ ಕಾಲೇಜಿನವರು ವಸೂಲು ಮಾಡುತ್ತಿರುವ ಕ್ಯಾಪಿಟೇಷನ್ ಶುಲ್ಕದ ಮೊತ್ತ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಕೆ.ಜಿ.ಎಫ್.ನ ಅನುದಾನಿತ, ಅನುದಾನ ರಹಿತ, ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲ ಕಾರ್ಯನಿರ್ವಹಿಸುವವರ ವೇತನ

3466 - ಶ್ರೀ ಬಕ್ತವತ್ಸಲಂ (ಕೆ.ಜಿ.ಎಫ್): ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್. ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ, ಅನುದಾನರಹಿತ ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪಾಧ್ಯಾಯರುಗಳಿಗೆ ಅವರು ನೇಮಕಾತಿಗೊಂಡ ದಿನಾಂಕದಿಂದ ವೇತನವನ್ನು ಪಾವತಿ ಮಾಡಲಾಗಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು):

ಅ) ನಿಗಧಿಪಡಿಸಿದ ಸಮಯದಲ್ಲಿ ವೇತನವನ್ನು ಶಿಕ್ಷಕರುಗಳಿಗೆ ನೀಡಲಾಗುತ್ತಿದೆ.

ಹಸಿರು ಮತ್ತು ಕೇಸರಿ ಪಡಿತರ ಚೀಟಿಗಳನ್ನು ಜಾರಿಗೆ ತರುವುದು.

3405 - ಶ್ರೀ ಜೌಡ ರೆಡ್ಡಿ.(ಚಿಂತಾಮಣಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಗ್ರಾಮಗಳಲ್ಲಿರುವ ಬಡವರು ಹಾಗೂ ದುರ್ಬಲ ವರ್ಗದ ಜನರು ಆಹಾರ ಪದಾರ್ಥಗಳನ್ನು ಪಡೆಯಲು ಹಸಿರು ಹಾಗೂ ಕೇಸರಿ ಪಡಿತರ ಚೀಟಿಗಳನ್ನು ಎಂದಿನಿಂದ ಜಾರಿಗೆ ತರಲಾಯಿತು?

ಆ) ಶ್ರೀಮಂತರು ಹಾಗೂ ಆರ್ಥಿಕವಾಗಿ ಮುಂದುವರಿದ ಜನರಿಗೆ ಕಾನೂನು ಬಾಹಿರವಾಗಿ ಹಸಿರು ಹಾಗೂ ಕೇಸರಿ ಪಡಿತರ ಚೀಟಿಗಳನ್ನು ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಅಂತಹ ಪಡಿತರ ಚೀಟಿಗಳನ್ನು ರದ್ದುಪಡಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ?

ಈ) ಸುಮಾರು ಶೇಕಡ 50ರಷ್ಟು ಮಂದಿ ಬಡತನ ರೇಖೆಯಿಂದ ಕೆಳಮಟ್ಟದಲ್ಲಿರುವ ಗ್ರಾಮದ ಜನರಿಗೆ ಹಸಿರು ಹಾಗೂ ಕೇಸರಿ ಪಡಿತರ ಚೀಟಿಗಳನ್ನು ವಿತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?